**ಅಬ್ದುಲ್ ರಶೀದ್**

ಕಲೆ: ಡಿ.ಕೆ. ರಮೇಶ್

# ರಕ್ತಚಂದನ

ಕೊಡಗಿನ ಹಿರಿಯ ಸಾಹಿತಿಗಳೂ, ಸಮರ ಸೇನಾನಿಯೂ, ಕಾಫಿ ಬೆಳೆಗಾರರೂ ಹಾಗೂ ಮಹಾ ರಸಿಕರೂ ಆಗಿದ್ದ ದಿವಂಗತ ಚಾರುದತ್ತರ ಘನತೆಯನ್ನು ಉಳಿಸಲು ಕಥೆಗಾರ ಮಾಡಬೇಕಾಗಿ ಬಂದಿರುವ ಒಂದು ಕಿರುಪ್ರಯತ್ನವೇ ನಿಮ್ಮ ಮುಂದಿರುವ ಈ ಉದ್ದವಾದ ಕಥೆ. ಈ ಕಥೆಯನ್ನು ನಾನೇನಾದರೂ ಬರೆದು ಮುಗಿಸದಿದ್ದರೆ ಕೊಡಗಿನ ಉದಯೋನ್ಮುಖ ಲೇಖಕಿಯೂ, ಅತೀವ ಸುಂದರಿಯೂ, ಮಹಾ ಜಾಣೆಯೂ ಮತ್ತು ಇತ್ತೀಚೆಗೆ ಮೆಲ್ಲಗೆ ಮಹಾ ಸ್ತ್ರೀವಾದಿಯೂ ಆಗುತ್ತಿರುವ ವಿಲಾಸಿನಿಯು ಬರೆದ ಚಾರುದತ್ತರ ಜೀವನ ಚರಿತ್ರೆಯೇ ಅಂತಿಮವಾಗಿಬಿಡುತ್ತದೆ. ಹಾಗೆ ಆದರೆ ಅದು ವಿಲಾಸಿನಿ ಎಂಬ ಸ್ತ್ರೀಯ ವಿಜಯ ಮತ್ತು ಇಬ್ಬರು ಪುರುಷ ಮಣಿಗಳ ಸೋಲು. ಒಂದು ಪುರುಷಮಣಿಯಾದ ಚಾರುದತ್ತರು ತಮ್ಮ ಎಂಬತ್ತೆರಡು ವಸಂತಗಳನ್ನು ಪೊಗದಸ್ತಾಗಿ ಮುಗಿಸಿ ಕಳೆದ ವರ್ಷದ ಇಂತಹದೇ ಆಷಾಢಮಾಸದಲ್ಲಿ ಮೇಲಕ್ಕೆ ಹೋಗಿದ್ದಾರೆ. ಉಳಿದಿರುವ ಇನ್ನೊಂದು ಪುರುಷಮಣಿ ಈ ಕಥೆಯ ನಿರೂಪಕನಾದ ನಾನು. ಇತ್ತೀಚೆಗೆ ಸ್ವಲ್ಪ ಖಿನ್ನತೆಯಿಂದ ಬಳಲುತ್ತಿರುವವನು.

'ನಿನಗೆ ಯಾವ ಖಿನ್ನತೆಯೂ ಇಲ್ಲ. ಯಾವ ಕಟ್ರೆಯೂ ಇಲ್ಲ. ನೀನು ವಿಲಾಸಿನಿಯನ್ನು ಹಾಗೆ ಬಿಡಕೂಡದು' ಎಂದು ನನ್ನ ಕನಸಿನಲ್ಲಿ ಪ್ರತ್ಯಕ್ಷರಾಗುವ ಚಾರುದತ್ತರ ಆಜ್ಞೆ.

'ವಿಲಾಸಿನಿಯ ಚದುರಂಗದ ನಡೆಗಳನ್ನು ಅವಳದೇ ಪಗಡೆಗಳನ್ನು ಬಳಸಿ ನೀನು ಸೋಲಿಸಬೇಕು' ಇದು ಅವರು ಕನಸಿನಲ್ಲಿ ನನಗೆ ಹೇಳಿಕೊಡುವ ತಂತ್ರ.

'ಆ ಮಾಂಕಾಳಿಯಂತಹ ಅವಳಿಗೆ ಹೊಗೆ ಹಾಕಲು ನೀನೇ ಸರಿ' ಅವರು ಖಿನ್ನವಾಗಿರುವ ನನ್ನ ಆತ್ಮವನ್ನು ಬಲೂನಿನಂತೆ ಉಬ್ಬಿಸಲು ನೋಡುತ್ತಾರೆ.

ಮಾಂಕಾಳಿ ಎಂದರೆ ಕೊಡಗಿನ ಒಬ್ಬಳು ಉಗ್ರ ದೇವತೆ.

ನನಗೆ ಅವರ ಮಾತುಗಳು ಒಳಗೊಳಗೇ ನಗು ತರಿಸುತ್ತವೆ.

ಅವರಾಡುವ ಮಾತುಗಳು ಆಜ್ಞೆಯಂತಿದ್ದರೂ ಕನಸಿನಲ್ಲಿ ಅವರು ಅದನ್ನು ಹೇಳುವ ರೀತಿ ಮರುಕ ತರಿಸುತ್ತದೆ.

ಆ ಕನಸು ಮುಗಿದು ಇನ್ನೇನು ನಿದ್ದೆ ಬರಬೇಕು.

ಅಷ್ಟು ಹೊತ್ತಿಗೆ ವಿಲಾಸಿನಿ ಕನಸಿನಲ್ಲಿ ಪ್ರತ್ಯಕ್ಷವಾಗುತ್ತಾಳೆ.

'ಎಲ್ಲಿಯವರೆಗೆ ಬಂತು ಮಾನ್ಯ ಕಥೆಗಾರರ ಚಿತಾವಣೆಗಳು' ಎಂದು ಮೂದಲಿಸುತ್ತಾಳೆ.